ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು
ನಿಗಮ ನಿಯಮಿತ,
*(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)*
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ. ಪಿ.ಪಟ್ಟಣ-571107
**Telephone No :08223- 274228**
**E-Mail: aeeppatna@cescmysore.org**

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
**Assistant Executive Engineer(Ele)**
**O&M Sub Division, CESC,**
**Periyapatna -571 107**
**Website: www.cescppt@rediffmail.com**

**Company Identity Number[CIN] :- U40109KA2004SGC035177**

ಕ್ರಮಾಂಕ : ಸೆಸ್ಕ್/ಸ.ಕಾ.ಇಂ/ಸ.ಇಂ(ತಾಂ)/ಪಿ.ಪಟ್ಟಣ/2020-21/ 1046 ದಿನಾಂಕ:- 04/10/2021

ದಿನಾಂಕ 21.09.2021 ರಂದು ಮಧ್ಯಾಹ್ನ 11:00 ಗಂಟೆಗೆ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ. ವಿಭಾಗ ಚಾ.ವಿ.ಸ.ನಿ.ನಿ ಕೆ.ಆರ್ ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಪಿರಿಯಾಪಟ್ಟಣ ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಬಿ.ಎಸ್ ಚಂದ್ರಶೇಖರ್ ರವರು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ ಚಾವಿಸನಿನಿ,ಕೆ.ಆರ್ ನಗರ.
2. ಶ್ರೀ ಅನಿಲ್.ಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ ಪಿರಿಯಾಪಟ್ಟಣ.
3. ಶ್ರೀ ಕುಮಾರ್ ಎಸ್. ಪ್ರಭಾರ ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
4. ಶ್ರೀ ಶಶಿಕುಮಾರ್ ಪಿ.ಆರ್ ಸಹಾಯಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ನಗರ.
5. ಶ್ರೀ ಸುನಿಲ್ ಸಹಾಯಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಬೈಲಕೊಪ್ಪ.
6. ಶ್ರೀ ಜಗದೀಶ್, ಪ್ರಭಾರ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಚಿಟ್ಟೇನಹಳ್ಳಿ.
7. ಶ್ರೀ ಶಿವಕುಮಾರ್ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಹುಣಸವಾಡಿ.
8. ಶ್ರೀ ಚಂದ್ರಶೇಖರ್ ಎಂ.ಎಸ್, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಕಂಪಲಾಪುರ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ಕಛೇರಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ ಮೈಸೂರು ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಪಿರಿಯಾಪಟ್ಟಣ ಉಪ ವಿಭಾಗ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ, ಗ್ರಾಹಕರು ಹಾಜರಾಗಿ ದಾಖಲಿಸಿದ್ದ ದೂರುಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ವಿವರಿಸಿ ಈ ಸಭೆಯಲ್ಲಿ ದಾಖಲಾಗುವ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಎಂದು ಸಭೆಗೆ ತಿಳಿಸಿದರು.

**ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.**

ಮು.ಪು.ನೊ

Scanned with CamScanner

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ ನಟರಾಜು ತಿರುಮಲಾಪುರ ಗ್ರಾಮ | ತಿರುಮಲಾಪುರ ಗ್ರಾಮದಲ್ಲಿ ಎಲ್.ಟಿ ವೈರ್ ಕಟ್ಟಾಗಿದ್ದು, ಸರಿಪಡಿಸಲು ಕೋರಿ | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಕೂಡಲೇ ತಿರುಮಲಾಪುರ ಗ್ರಾಮದಲ್ಲಿ ಎಲ್.ಟಿ ವೈರ್ ಕಟ್ಟಾಗಿದ್ದು, ಕೂಡಲೇ ಸರಿಪಡಿಸಲು ಬೈಲಕೊಪ್ಪ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 2 | ಶ್ರೀ ಮಂಜಣ್ಣ ದೊಡ್ಡಹೊಸೂರು ಗ್ರಾಮ | ದೊಡ್ಡ ಹೊಸೂರು ಗ್ರಾಮದಲ್ಲಿ 11 ಕೆ.ವಿ ವೈರ್ ಕಟ್ಟಾಗಿದ್ದು, ಸರಿಪಡಿಸಲು ಕೋರಿ | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ದೊಡ್ಡಹೊಸೂರು ಗ್ರಾಮದಲ್ಲಿ 11 ಕೆ.ವಿ ವೈರ್ ಕಟ್ಟಾಗಿದ್ದು, ಸರಿಪಡಿಸಲು ಬೈಲಕೊಪ್ಪ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 3 | ಶ್ರೀ ರಘು ದೊಡ್ಡಹೊನ್ನೂರು ಗ್ರಾಮ | ದೊಡ್ಡ ಹೊನ್ನೂರು ಗ್ರಾಮದಲ್ಲಿ ಎಲ್.ಟಿ ವೈರ್ ಕಟ್ಟಾಗಿ ಮನೆಯ ಮೇಲೆ ಬಿದ್ದಿದ್ದು, ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ದೊಡ್ಡ ಹೊನ್ನೂರು ಗ್ರಾಮದಲ್ಲಿ ಎಲ್.ಟಿ ವೈರ್ ಕಟ್ಟಾಗಿ ಮನೆಯ ಮೇಲೆ ಬಿದ್ದಿದ್ದು, ಕೂಡಲೇ ಸರಿಪಡಿಸಲು ಬೈಲಕೊಪ್ಪ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 4 | ಶ್ರೀ ಅಂತೋಣಿ ಹುಣಸೇಕುಪ್ಪೆ ಗ್ರಾಮ | ಹುಣಸೇಕುಪ್ಪೆ ಗ್ರಾಮದಲ್ಲಿ ವಿಫಲಗೊಂಡಿರುವ 25 ಕೆ.ವಿ.ಎ ಪರಿವರ್ತಕವನ್ನು ಬದಲಾಯಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಹುಣಸೇಕುಪ್ಪೆ ಗ್ರಾಮದಲ್ಲಿ ವಿಫಲಗೊಂಡಿರುವ 25 ಕೆ.ವಿ.ಎ ಪರಿವರ್ತಕವನ್ನು ಬದಲಾಯಿಸಲು ಚಿಟ್ಟೇನಹಳ್ಳಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 5 | ಶ್ರೀ ಸುರೇಶ್ ಹುಣಸವಾಡಿ ಗ್ರಾಮ | ಹುಣಸವಾಡಿ ಗ್ರಾಮದಲ್ಲಿ ಓರೆಯಾಗಿರುವ ಕಂಬವನ್ನು ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಸ್ಥಳ ಪರಿಶೀಲಿಸಿ ಕೂಡಲೇ ಸರಿಪಡಿಸಲು ಹುಣಸವಾಡಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 6 | ಶ್ರೀ ಬಸವರಾಜು ನಂದಿನಾಥಪುರ ಗ್ರಾಮ | ನಂದಿನಾಥಪುರ ಗ್ರಾಮದಲ್ಲಿ ಮಳೆ ಗಾಳಿಯಿಂದ ಬಾಗಿರುವ ಕಂಬವನ್ನು ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಸ್ಥಳ ಪರಿಶೀಲಿಸಿ ಕೂಡಲೇ ಅಂದಾಜು ಪಟ್ಟಿಯನ್ನು ತಯಾರಿಸಿ ತುರ್ತಾಗಿ ಕಾಮಗಾರಿ ನಿರ್ವಹಿಸಲು ಹುಣಸವಾಡಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 7 | ಶ್ರೀ ಸ್ವಾಮಿಗೌಡ ಚಿಕ್ಕಬೇಲಾಳು ಗ್ರಾಮ | ಚಿಕ್ಕಬೇಲಾಳು ಗ್ರಾಮದಲ್ಲಿ ಎಲ್.ಟಿ ಕಂಬ ಬಾಗಿದ್ದು, ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಎಲ್.ಟಿ ಕಂಬ ಬಾಗಿದ್ದು, ಸರಿಪಡಿಸಲು ಕಂಪಲಾಪುರ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 8 | ಶ್ರೀ ಮೊಹಮ್ಮದ್ ಅರೇನಹಳ್ಳಿ ಗ್ರಾಮ | ಅರೇನಹಳ್ಳಿ ಗ್ರಾಮದಲ್ಲಿ ಓರೆಯಾಗಿರುವ ಕಂಬವನ್ನು, ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರು ಮಾತನಾಡಿ, ಓರೆಯಾಗಿರುವ ಕಂಬವನ್ನು, ಕಂಪಲಾಪುರ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್(ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ, ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ:-12
ಮೌಖಿಕ ದೂರುಗಳ ಸಂಖ್ಯೆ-8
ಪತ್ರ ಲಿಖಿತ ದೂರುಗಳ ಸಂಖ್ಯೆ-5

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಪಿರಿಯಾಪಟ್ಟಣ
ಪಿರಿಯಾಪಟ್ಟಣ

ಪ್ರತಿಗಳು:-

1. ಮಾನ್ಯ ಅಧೀಕ್ಷಕಇಂಜನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ನೋಡಲ್‌ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹುಣಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.

ಮು.ತಿ.ನೊ

Scanned with CamScanner